ಆಗ ಕರೆಗಂಟೆಯನ್ನೂ ಬಾರಿಸದೆ ಬರುತ್ತದೆ
ವಸಂತ.

ನಮ್ಮದು ಜಗತ್ತಿನಲ್ಲೇ ಅತ್ಯಂತ ಹಳೆಯ
ಬುಡಕಟ್ಟು
ಅತ್ಯಂತ ಪುಟ್ಟ ಬುಡಕಟ್ಟೂ ನಮ್ಮದೇ...
ಗಿಳಿಯ ರೆಕ್ಕೆಯ ಮೇಲೆ ಬರೆದಿರುವ
ಒಂದೇ ಒಂದು ಅಕ್ಷರ ನಮ್ಮ ಸಂಕೇತ ಚಿಹ್ನೆ.
ಭೂಮಿಯ ಮೇಲೆ ಗಿಳಿಗಳು ಮತ್ತು ಅಕ್ಷರ
ಇರುವ ತನಕ
ನಾವೂ ಇರುವೆವೆಂದು ನಮ್ಮ ನಂಬಿಕೆ.
ಐದು ಜನ ಒಟ್ಟಾಗಿ ನಗುವಾಗ ನಾವು ಇರುತ್ತೇವೆ
ಅವರಲ್ಲಿ ಒಬ್ಬನಾಗಿ.
ಯಾರೋ ಒಬ್ಬ ಒಬ್ಬನೇ ಅಳುವಾಗ ನಾವು
ಇರುತ್ತೇವೆ
ಅವನಿಗೆ ಜೊತೆಯಾಗಿ.

◆ **ಜಗತ್ತಿನ ಕಣಕಣದಲ್ಲೂ ಮಿಡಿಯುತ್ತಿರುವ ಪ್ರೀತಿಯ ಅದ್ಭುತ ಅಭಿವ್ಯಕ್ತಿಯಾಗಿ ನಿಮ್ಮ ಈ ಕವಿತೆ ಕಾಣುತ್ತದೆ... ಕವಿತೆಯನ್ನು ಒಂದು 'ರಾಜಕೀಯ' ಕ್ರಿಯೆಯಾಗಿ ನೋಡಲು ಸಾಧ್ಯವೆ? ಈ ಮಾತನ್ನು ಏಕೆ ಕೇಳುತ್ತಿದ್ದೇನೆಂದರೆ, ನಿಮ್ಮ ಅತ್ಯಂತ ಭಾವತೀವ್ರವಾದ ಪ್ರೇಮಕವಿತೆಗಳು ಕೇವಲ ಭಾವನೆಗಳ ತುಡಿತ ಮಾತ್ರವಲ್ಲ, ಅವುಗಳಲ್ಲಿ 'ರಾಜಕೀಯ'ದ ಧ್ವನಿ ಇದ್ದೇ ಇದೆ.**

ಖಂಡಿತವಾಗಿಯೂ, ನನ್ನ ಕಾವ್ಯದಲ್ಲಿ ಸಮಾಜವನ್ನು ಕುರಿತ ಮತ್ತು ಅದರ ಜೊತೆಗೆ ನಡೆಸುವ ಸಂವಾದವಿದೆ. ನಾನು ಘಟನೆಗಳ ಬಗ್ಗೆ, ಸಂದರ್ಭಗಳ ಬಗ್ಗೆ, ನನ್ನನ್ನು ಪ್ರಭಾವಿಸುವ, ದುಃಖಕ್ಕೀಡು ಮಾಡುವ ಅಥವಾ ಸಿಟ್ಟು ಬರಿಸುವ ವ್ಯಕ್ತಿಗಳ ಬಗ್ಗೆ ಬರೆಯುತ್ತೇನೆ. ನನ್ನೊಳಗೆ ಯಾವತ್ತೂ ಬಿಡುಗಡೆಗೊಂಡ ಸಮಾಜದ ಕನಸು ಉರಿಯುತ್ತಲೇ ಇರುತ್ತದೆ, ಇದು ನನ್ನ ಕವಿತೆಗಳಲ್ಲಿ ಹಲವು ಬಗೆಯಲ್ಲಿ ಪ್ರತಿಫಲಿಸುತ್ತದೆ. ಆದಾಗ್ಯೂ ನನ್ನನ್ನು 'ರಾಜಕೀಯ ಕವಿ' ಎಂದು ಕರೆಯುವುದನ್ನು ನಿರಾಕರಿಸುತ್ತೇನೆ, ಯಾಕೆಂದರೆ ನನ್ನ ಕಾವ್ಯಕ್ಕೆ ಹಲವು, ವಿಭಿನ್ನ ಆಯಾಮಗಳಿವೆ.

◆ **ನಿಮ್ಮ ಪ್ರತಿಯೊಂದು ಕವಿತೆಯೂ ವಿಸ್ತಾರ**



ಸಚ್ಚಿದಾನಂದನ್ ಅವರೊಂದಿಗೆ ಸಂದರ್ಶಕಿ

**ಅನುಭವ ಪ್ರಪಂಚ. ಜೊತೆಗೆ, ಪ್ರತಿ ಕವಿತೆಯೂ ಒಂದೇ ಅನುಭವದ ಹಲವು ಮಗ್ಗುಲುಗಳನ್ನು, ಹಲವು ಕೋನದಲ್ಲಿ ಬಗೆಯುತ್ತವೆ. ಇವೆರಡನ್ನೂ ಒಟ್ಟಿಗೆ ಸಾಧಿಸುವುದು ಹೇಗೆ?**

ನನ್ನ ಪ್ರಕಾರ, ನಿಖರವಾಗಿ ಕಾವ್ಯವು ಮಾಡುವುದು ಅದನ್ನೇ. ಪ್ರೀತಿ, ಸ್ನೇಹ, ನಿಸರ್ಗ, ಸಮಾಜ – ಪ್ರತಿಯೊಂದು ಅನುಭವವನ್ನೂ ಹಲವು ದೃಷ್ಟಿಕೋನಗಳಲ್ಲಿ ನೋಡಬಹುದು. ಅವು ಬಹು ಆಯಾಮಗಳನ್ನು ಗಳಿಸುವುದು ಹೀಗೆಯೇ. ಕಲೆಯು ನಮಗೆ ಬದುಕು, ಪ್ರಕೃತಿ, ವಿಶ್ವವನ್ನು ನೋಡುವ ಹಲವಾರು ದಾರಿಗಳನ್ನು ಒದಗಿಸುತ್ತದೆ, ಇದು ಒಬ್ಬ ಕವಿಯಿಂದ ಮತ್ತೊಬ್ಬ ಕವಿಯನ್ನು ಭಿನ್ನವಾಗಿಸುವುದು ಮಾತ್ರವಲ್ಲ, ಅವರ ಕವಿತೆಗಳನ್ನೂ ಭಿನ್ನವಾಗಿಸುತ್ತದೆ. ಪ್ರತಿಯೊಬ್ಬ ಕವಿಯೂ ಪ್ರತಿಯೊಂದು ಕವಿತೆಯ ಜೊತೆಗೆ ಬೆಳೆಯುತ್ತಾನೆ, ಈ ಬೆಳವಣಿಗೆಯು ಅವರ ನೋಟಕ್ರಮ ಮತ್ತು ದರ್ಶನದ ಬದಲಾವಣೆಗೂ ಸಹಾಯ ಮಾಡುತ್ತದೆ. ಎಪ್ಪತ್ತೇಳನೇ ವಯಸ್ಸಿನಲ್ಲಿರುವ ಕವಿಯು ಇಪ್ಪತ್ತೇಳರ ಕವಿಯಲ್ಲ.

◆ **ಮಹಾಕಾವ್ಯ ಬರೆಯದೆಯೂ ಒಬ್ಬ ಕವಿ 'ಮಹಾಕವಿ' ಆಗಬಲ್ಲ/ಳು ಅನ್ನುವುದಕ್ಕೆ ನೀವು ಸಾಕ್ಷಿಯಂತಿದ್ದೀರಿ. ಎಂದಾದರೂ 'ಮಹಾಕಾವ್ಯ'**